'ಎಷ್ಟು ಚಿತ್ರ ಬರೀಬೇಕಪ್ಪ ನೀನು?...' ಎಂದು ಮತ್ತೆ ಡಾ. ವಾಹೀದ್ ಪ್ರಶ್ನಿಸಿದರೆ ಆತ ವೈದ್ಯರ ಪ್ರಶ್ನೆ ತನಗಲ್ಲವೇ ಅಲ್ಲ ಎನ್ನುವಂತೆ: 'ಅಮ್ಮಾ... ಬೇಗ ಗಣಿತ ಪುಸ್ತಕ ತೆಗೆಯಮ್ಮ, ಅಲ್ಲಿ ಮರದ ಮೇಲೆ ಏಳು ಬಾತುಕೋಳಿಗಳಿವೆ. ಅವು ಹಾರಿ ಮನೆಗೆ ಹೋಗುತ್ತೆ ಮತ್ತೆ.'

'ಲೇಯ್ ಕೌಶಿಕಾ... ಬಾತುಕೋಳಿ ಮರದ ಮೇಲೆ ಇರುತ್ತೇನೋ?!... ಅದು ಕೊಕ್ಕರೆ ಕಣೋ... ಸರಿಯಾಗಿ ನೋಡಿದ್ಯೇನೋ?...'

ಅವನು ಡಾ. ವಾಹೀದ್ ಅವರ ಆ ಪ್ರಶ್ನೆಗೆ ಉತ್ತರಿಸೋದಕ್ಕೆ ಮುನ್ನವೇ, ಅಮ್ಮ ಕುಮುದಳು ಆಗಲೇ ಸಿದ್ಧ ಮಾಡಿಕೊಂಡು ಬಂದಿದ್ದ ಆತನ ಸ್ಕೂಲ್‌ಬ್ಯಾಗ್‌ನೊಳಗಿನ ಅಪಾರ 'ಬೌದ್ಧಿಕ ಸಂಪತ್ತಿ'ನಿಂದ ಬಣ್ಣದ ಪೆನ್ಸಿಲ್, ಕ್ರಯಾನ್ಸ್, ಗಣಿತ ಪುಸ್ತಕಗಳನ್ನು ತೆಗೆದು ಆತನ ಕೈಗಿಟ್ಟಾಗ, ಅಕ್ಷಯಕುಮಾರ ಒಂದು ಕ್ಷಣ ಪೆಚ್ಚಾಗಿ ಕುಮುದಳ ಮುಖವನ್ನೇ ಚಿಂತೆಯಿಂದ ದಿಟ್ಟಿಸಿದ್ದ.

ತನ್ನ ಗಣಿತ ಪುಸ್ತಕದ ಹೊರರಟ್ಟಿನ ಕವಚವನ್ನು ಬಲಕೈಯಲ್ಲಿ ಗಾಳಿಪಟದಂತೆ ಹಿಡಿದು... ಹಾರಿಸಿಕೊಂಡು ಓಡಿಹೋದ ಕೌಶಿಕನನ್ನು ಮುದ್ದಾಗಿ ದಿಟ್ಟಿಸಿ ನೋಡಿದ ಡಾ. ವಾಹೀದ್ ಅವರು, ತಕ್ಷಣ ಅತ್ಲಾಗೆ ಲಾನ್‌ನಲ್ಲಿದ್ದ ಮಕ್ಕಳತ್ತ ಕಣ್ಣು ಹಾಯಿಸಿದವರೇ... ಏನೋ ಯೋಚನೆ ಮಾಡಿ ಮೇಲ್‌ನರ್ಸ್ ಮುನಿಯಪ್ಪನಿಗೆ ಕರೆ ಮಾಡಬೇಕೆನ್ನುವಷ್ಟರಲ್ಲಿ ಆಚೆಯಿಂದ ಆತನದ್ದೇ ಕರೆ ಬಂದಿತ್ತು.

'ಆಯ್ತಪ್ಪ... ಬೇಗ ಬಂದು ಬಿಡು; ಅವರ ಹಾಡು ಮುಗೀತಲ್ವ... ಬೇಗ ಬೇಗ ಕೈ ಕಾಲು ತೊಳಿಸಿ... ಬ್ರೆಡ್ ಬಟರ್ ತಿನಿಸಿ ಕ್ಲಾಸಿಗೆ ಕಳಿಸು... ಇವತ್ತು ನರಿ ಮತ್ತು ಮೊಲದ ಕತೆ ಹೇಳಿಸಿ, ಇಪ್ಪತ್ತು ನೀರುಳ್ಳಿ, ಐದು ಟೊಮ್ಯಾಟೋ, ಹತ್ತು ಬಟಾಟೆ ಅವರ ಮುಂದಿಟ್ಟು ಕೂಡಿಸೋದನ್ನು ಕಲಿಸಕ್ಕೆ ಸೌಮ್ಯಗೆ ಹೇಳು... ನಂತರ ನಾನೇ ಬಂದು ಹೊಸ ಹಾಡು ಹೇಳಿಸ್ತೀನಿ... ಓ.ಕೆ, ಓ.ಕೆ, ಓಕೆ...'

ಇಲ್ಲಿ ಕೌಶಿಕ ಆವರಣದ ಮರದಡಿ ಕೂತು, ಗುಬ್ಬಚ್ಚಿದ್ದೋ... ಬಾತುಕೋಳಿಯದ್ದೋ... ಚಿತ್ರ ಬಿಡಿಸುವಷ್ಟರಲ್ಲಿ ಅಲ್ಲಿ ಮುನಿಯಪ್ಪ ಬಂದು ಎಲ್ಲ ಮಕ್ಕಳನ್ನು ಒಳಗೆ ಕರೆದೊಯ್ದಾಗಿತ್ತು. ಡಾ. ವಾಹೀದ್ ಅವರು ಅಕ್ಷಯಕುಮಾರ್ ದಂಪತಿಯನ್ನು ಅಲ್ಲೇ ಮಾವಿನ ಮರದಡಿಗೆ ಕರೆದೊಯ್ದು ತಾವು ಮೊದಲಿಗೆ ಚಕ್ಕಳ ಮಕ್ಕಳ ಹಾಕಿ ಕೂತೊಡನೆ, ದಂಪತಿ ಮಗ ಕೌಶಿಕನ 'ಬೌದ್ಧಿಕ ಆಸ್ತಿ'ಗಳನ್ನು ತಮ್ಮೆದುರುಗಿರಿಸಿಕೊಂಡು ತಾವೂ ವೈದ್ಯರಿಗೆ ಎದುರಾಗಿ ಕೂತುಬಿಟ್ಟರು. ರಾಮಯ್ಯಾಳ್ವರು ದೂರದಲ್ಲೇ ನಿಂತು ಈ 'ದೃಶ್ಯ'ವನ್ನು ದಿಟ್ಟಿಸುತ್ತಿದ್ದರು.

ಡಾ. ವಾಹೀದ್ ಅವರು ಕೌಶಿಕನ ಸ್ಕೂಲ್‌ಬ್ಯಾಗನ್ನು ತಮ್ಮೆದುರಿಗಿರಿಸಿಕೊಂಡು, ಅದರೊಳಗಿನ 'ಸಕಲ ಸಂಪತ್ತನ್ನು' ನಿಧಾನಕ್ಕೆ ಒಂದೊಂದಾಗಿಯೇ ಹೊರಜಗತ್ತಿಗೆಳೆದು ಅದರತ್ತ ಕಣ್ಣಾಡಿಸುತ್ತಲೇ... ಅಕ್ಷಯಕುಮಾರನನ್ನು ಪ್ರಶ್ನಿಸತೊಡಗಿದ್ದರು.

'ಹೇಳಿ ಅಕ್ಷಯಕುಮಾರ್ ಅವರೇ ನಿಮ್ಮ ಮಗನದ್ದು ಸಮಸ್ಯೆ ಏನು... ಹೇಳಿ...' ಅಕ್ಷಯಕುಮಾರನು ಆದದ್ದಾಗಲೀ... ಎಂದು ಎದೆಗಟ್ಟಿ ಮಾಡಿಕೊಂಡು ಹೇಳತೊಡಗಿದ್ದ : 'ಸರ್... ನನ್ನ ಮಗ ಕೌಶಿಕ ಓದಿ ದೊಡ್ಡ ಮನುಷ್ಯನಾಗಬೇಕು ಎನ್ನುವ ಆಸೆ ನನಗೆ; ಆದ್ರೆ ಆತನಿಗೆ ವಯಸ್ಸಿಗೆ ತಕ್ಕ ಬುದ್ಧಿ, ಪ್ರೌಢಿಮೆ ಇಲ್ಲಾಂತ ನನಗೆ ಆಗಾಗ ಅನಿಸ್ತಿರುತ್ತೆ ಸರ್...'

'ನಿಮ್ಗೆ ಯಾಕೆ ಹಾಗೆ ಅನಿಸುತ್ತೆ? ಯಾವಾಗ ಹಾಗೆ ಅನಿಸುತ್ತೆ... ಹೇಳಿ?' 'ಓದು ಕೌಶಿ ಓದು... ಓದಿ ನೀನು ದೊಡ್ಡ ಡಾಕ್ಟ್ರು, ಎಂಜಿನಿಯರ್ ಆಗಬೇಕು' ಎಂದು ನಾನು ದಿನಾ ಅನ್ನುತ್ತಿರುತ್ತೇನೆ ಸರ್. ನಾನು ಹಾಗೆ ಅನ್ನದಿದ್ರೂ... ಆತ ಎಡೆಬಿಡದೆ ಏನೋ ಒಂದು ಪುಸ್ತಕ